# ಹಿಂಸೆಗೇನು ಮದ್ದು?

ತರಕಾರಿ ಹೆಚ್ಚುವುದು, ಹಣ್ಣುಗಳನ್ನು ಹೋಳು ಮಾಡುವುದು ಎಲ್ಲ ಮನೆಗಳಲ್ಲಿ ನಡೆಯುವ ಸಹಜ ಕ್ರಿಯೆ. ಈ 'ಹೆಚ್ಚುವಿಕೆ' ಹೊಟ್ಟೆ ತುಂಬಿಸಿಕೊಳ್ಳಲು ಅಗತ್ಯವಾದುದು. ಇತ್ತೀಚೆಗೆ ಮತ್ತೊಂದು ಬಗೆಯ ತುಂಡರಿಸುವಿಕೆಯೂ ಕೆಲವು ಮನೆಗಳಲ್ಲಿ ನಡೆಯುತ್ತಿದೆ. ಪುರುಷಪಶುಗಳು ತಮ್ಮ ಸಂಗಾತಿಯನ್ನು ತುಂಡುತುಂಡಾಗಿ ಕತ್ತರಿಸಿದ ಘಟನೆಗಳು ದೇಶದ ವಿವಿಧ ಭಾಗಗಳಿಂದ ವರದಿಯಾಗಿವೆ. ಪತಿ ಪತ್ನಿಯನ್ನು, ಪತ್ನಿ ಪತಿಯನ್ನು, ಮಕ್ಕಳು ಹೆತ್ತವರನ್ನು ತುಂಡುತುಂಡಾಗಿ ಕತ್ತರಿಸಿರುವ ಘಟನೆಗಳು ನಡೆದಿವೆ. ಕೋಪದ ಭರದಲ್ಲಿ 'ತುಂಡು ತುಂಡಾಗಿ ಕತ್ತರಿಸುವೆ' ಎಂದು ಬಳಕೆಯಾಗುತ್ತಿದ್ದ ಮಾತೀಗ ಬರಿಯ ಆವೇಶವಾಗಿ ಉಳಿದಿಲ್ಲ. ಅದು ಕೃತಿರೂಪಕ್ಕೂ ಬಂದಿದೆ. ಮನುಷ್ಯನಿಗೂ ತರಕಾರಿಗೂ ಇರುವ ವ್ಯತ್ಯಾಸವನ್ನು ನಾವು ಮರೆತಿದ್ದು ಯಾವಾಗ?

ಪರಂಪರೆ ನೋಡಿ. ಮನುಷ್ಯನ ಅಂತರಂಗದಲ್ಲಿನ ಕ್ರೌರ್ಯವನ್ನು ನಿವಾರಿಸಲಿಕ್ಕಾಗಿ ಬುದ್ಧ ತನ್ನ ಜೀವನದುದ್ದಕ್ಕೂ ಶ್ರಮಿಸಿದ. ಬುದ್ಧನ ಕಣ್ಣುಗಳ ಬೆಳುದಿಂಗಳ ಕಾಂತಿಯೆದುರು ಅಂಗುಲಿಮಾಲನ ಕ್ರೌರ್ಯ ತಲೆತಗ್ಗಿಸಿತು. ಬುದ್ಧನ ಜೀವಸ್ಪರ್ಶದಿಂದ ಸಾವಿರ ಸಾವಿರ ಎದೆಗಳಲ್ಲಿ ಮಾನವೀಯತೆ ಜಾಗೃತಗೊಂಡಿತು. ಗಾಂಧಿ ಮಹಾತ್ಮನದೂ ಅಹಿಂಸೆಯ ದಾರಿ. ಆತ ಕೋವಿ–ಕೋಲು ಹಿಡಿಯಲಿಲ್ಲ. 'ಬಲ'ವನ್ನು ನೆಚ್ಚಿದ ಪ್ರಭುತ್ವವನ್ನು ಸತ್ಯ–ಅಹಿಂಸೆಯ ಮೂಲಕ ಕಂಗಾಲಾಗಿಸಿದ ಕೀರ್ತಿ ಮಹಾತ್ಮನದು. ಈ ಬುದ್ಧಪಥ, ಮಹಾತ್ಮನ ಮಾರ್ಗಗಳ ಜೊತೆಗೇ, ಇರ್ವರೂ ಹಿಂಸೆ–ಅಸಹನೆಗೇ ಬಲಿಯಾದುದನ್ನೂ ನಾವು ಮರೆಯಬಾರದು. ಕರುಣೆಯೇ ಮೈದಾಳಿದಂತಿದ್ದ ಕ್ರಿಸ್ತನ ಅವಸಾನವೂ ದಾರುಣ ನೋವು–ಹಿಂಸೆಯಲ್ಲಿ ಕೊನೆಗೊಂಡಿತು. ಇವೆಲ್ಲವೂ ಏನನ್ನು ಸೂಚಿಸುತ್ತವೆ? ಮನುಷ್ಯ ಮೂಲತಃ ಪಶುವೆಂದೇ? ಹಿಂಸಾಪ್ರಿಯನೆಂದೇ? ಈ ಪಶುಪ್ರವೃತ್ತಿಯನ್ನು, ಹಿಂಸಾ ಮನೋಧರ್ಮವನ್ನು ಬದಲಿಸಲು ಆಗಾಗ ಪ್ರಯತ್ನಗಳು ನಡೆದರೂ ಅವುಗಳ ಯಶಸ್ಸು ತಾತ್ಕಾಲಿಕವೆಂದೇ?

ಹೌದು, ಸತ್ಯ–ಅಹಿಂಸೆಯ ಪ್ರಯೋಗಗಳ ಆಯುಸ್ಸು ದೀರ್ಘವಾದುದಲ್ಲ ಎನ್ನುವುದಕ್ಕೆ ನಿದರ್ಶನಗಳನ್ನು ಈ ಜಗತ್ತು ಮತ್ತೆ ಮತ್ತೆ ಕಂಡಿದೆ. ವೈಯಕ್ತಿಕ ದ್ವೇಷದ ಪ್ರಕರಣಗಳಂತೆ, ಸಾಮೂಹಿಕ ಹತ್ಯಾಕಾಂಡಕ್ಕೆ ಕಾರಣವಾಗುವ ಯುದ್ಧಗಳನ್ನೂ ಮನುಕುಲ ಕಂಡಿದೆ. ಒಂದಲ್ಲಾ ಒಂದು ಬಗೆಯ ಯುದ್ಧ ನಿರಂತರವಾಗಿ ನಡೆಯುತ್ತಲೇ ಇದೆ. ಈ ಎಲ್ಲ ಕ್ಷೋಭೆಯ ಅರ್ಥ, ಈ ಜಗತ್ತಿನಲ್ಲಿ ಹಿಂಸೆಯೇ ಶಾಶ್ವತವಾದುದು ಎಂದರ್ಥವಲ್ಲ. ಈ ಬಿಕ್ಕಟ್ಟನ್ನು ನಾವು ಅರ್ಥ ಮಾಡಿಕೊಳ್ಳಬೇಕಾದುದು, ಕ್ಷೋಭೆ ಹೆಚ್ಚಿದಷ್ಟೂ, ಶಾಂತಿ ಮತ್ತು ಅಹಿಂಸೆಯ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿರಬೇಕು ಎನ್ನುವ ನೆಲೆಯಲ್ಲಿ. ಈ ಸತ್ಯ ಬುದ್ಧನಿಗೂ ತಿಳಿದಿತ್ತು, ಗಾಂಧಿಗೂ ತಿಳಿದಿತ್ತು. ತಾವು ಹಚ್ಚುವ ಶಾಂತಿ ಹಣತೆಯ ಬೆಳಕಿನ ಆಯುಷ್ಯ ದೀರ್ಘವಲ್ಲ ಎಂದು ತಿಳಿದೂ ಅವರು ತಮ್ಮ ಪ್ರಯತ್ನ ಕೈಬಿಡಲಿಲ್ಲ. ಬುದ್ಧ ಮತ್ತು ಬಾಪುವನ್ನು ಜಗತ್ತು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಿದೆ ಎಂದರೆ, ಆ ನೆನಪುಗಳನ್ನು ವ್ಯಕ್ತಿಸ್ಮರಣೆಯ ರೂಪದಲ್ಲಿ ನೋಡಬೇಕಾಗಿಲ್ಲ. ಮನುಕುಲಕ್ಕೆ ಅಗತ್ಯವಾದ ಮೌಲ್ಯಗಳ ಕನವರಿಕೆಯ ರೂಪದಲ್ಲಿ ಮಹಾತ್ಮರ ನೆನಪು ಮರುಕಳಿಸುತ್ತಿರುತ್ತದೆ. ವಿಶ್ವದಲ್ಲಿ ಹಿಂಸೆಯೇ ಇಲ್ಲ ಎನ್ನುವುದಾದರೆ, ಯುದ್ಧವೇ ಇಲ್ಲ ಎನ್ನುವುದಾದರೆ, ಅಲ್ಲಿ ಮಹಾತ್ಮರ ನೆನಪುಗಳು ಮರುಕಳಿಸುವುದಿಲ್ಲ. ಅಂಥ ಸನ್ನಿವೇಶ ಎಂದಾದರೂ ಸಾಕಾರಗೊಂಡೀತೆ?

ಹೆಣ್ಣುಮಗಳೊಬ್ಬಳು ಮೂವತ್ತೈದು ತುಣುಕುಗಳಾದ ಸಂಗತಿ ಸಮಾಜವನ್ನು ಬೆಚ್ಚಿಬೀಳಿಸುತ್ತದೆ. ಮಕ್ಕಳ ಬ್ಯಾಗ್‌ಗಳಲ್ಲಿ ಮಾದಕ ವಸ್ತುಗಳು ದೊರೆತಾಗ ಆಘಾತವಾಗುತ್ತದೆ. ಆದರೆ, ಇಂಥ ಘಟನೆಗಳು ನಡೆದಾಗ ಸಮಾಜದ ನೈತಿಕತೆಯ ಬಗ್ಗೆ ಪ್ರಶ್ನೆಗಳೇಳುತ್ತವೆ. ಆದರೆ, ಜಿಜ್ಞಾಸೆ ನಡೆಯಬೇಕಾದುದು ವೈಯಕ್ತಿಕ ನೆಲೆಗಟ್ಟಿನಲ್ಲಲ್ಲವೇ? ವೈಯಕ್ತಿಕ ಚಾರಿತ್ರ್ಯದಲ್ಲಿ ಉಂಟಾದ ಊನವೇ ಸಮಾಜದಲ್ಲೂ ಪ್ರತಿಫಲನಗೊಳ್ಳುತ್ತಿದೆ ಎನ್ನುವುದನ್ನು ನಾವು ಮರೆಯಬಾರದು.

ಚಾರಿತ್ರ್ಯವನ್ನು ರೂಢಿಸಿಕೊಳ್ಳುವ ನಮ್ಮ ಬಹುತೇಕ ಪ್ರಯತ್ನಗಳು 'ನೈತಿಕ ಶಿಕ್ಷಣ'ದ ಅಗತ್ಯವನ್ನು ಪ್ರತಿಪಾದಿಸುವಲ್ಲಿ ಕೊನೆಗೊಳ್ಳುತ್ತವೆ. ಆ ಶಿಕ್ಷಣ ಯಾವ ಬಗೆಯದು? ಶಾಲೆಗಳಲ್ಲಿ ನೀತಿಕಥೆಗಳನ್ನು ಹೇಳುವುದರಿಂದಲೋ, ಗೀತೆಯನ್ನು ಕಲಿಸುವುದರಿಂದಲೋ ನೈತಿಕತೆ ಒದಗುವುದಿಲ್ಲ. ಶಾಲಾ ಕೊಠಡಿಗಳಿಗೆ ಕೇಸರಿ ಬಣ್ಣ ಬಳಿಸುವುದರಿಂದಲೂ ನೈತಿಕತೆ ಸಿದ್ಧಿಸುವುದಿಲ್ಲ. ಹಾಗಾದರೆ, ನೈತಿಕತೆ ಸಿದ್ಧಿಸುವುದು ಹೇಗೆ? ಯಾವಾಗ? ಇದಕ್ಕೆ ಉತ್ತರವಾಗಿ ಮಹಾತ್ಮರ ಮಾರ್ಗವನ್ನೇ ಹೊರಳಿ ನೋಡಬೇಕು.

ದೇಶದ ದೀನ ದಲಿತರನ್ನು ನೋಡಿದ ಗಾಂಧೀಜಿ, ತಾವೂ ಅವರಂತೆಯೇ ಇರಲು ನಿರ್ಧರಿಸಿದ್ದರ ಫಲವೇ ಅವರ ಸರಳತೆ. ಸತ್ಯ–ಅಹಿಂಸೆಯ ಅಗತ್ಯವನ್ನು ತಮ್ಮ ಅನುಯಾಯಿಗಳಿಗೆ ಬೋಧಿಸಿದ ಅವರು, ತಾವು ಹೇಳಿದ್ದನ್ನು ಕೃತಿಯಲ್ಲಿಯೂ ಅನುಸರಿಸಿದರು. ಕೊಲ್ಲ ಬಂದವರನ್ನೂ ಕ್ಷಮಿಸುವ ಉದಾತ್ತತೆ ಅವರದಾಗಿತ್ತು. ಅಸ್ಪೃಶ್ಯತೆಯನ್ನು ಕಟುವಾಗಿ ವಿರೋಧಿಸಿದ ಅವರು, ಅಸ್ಪೃಶ್ಯತೆ ನಿವಾರಣೆಗಾಗಿ ಭಾಷಣಗಳನ್ನು ಅಥವಾ ಲೇಖನಗಳನ್ನು ಬರೆದು ಸುಮ್ಮನಾಗಲಿಲ್ಲ. ಆ ಸಮುದಾಯದೊಂದಿಗೆ ಬೆರೆತರು, ಅವರ ಕೇರಿಗಳನ್ನು ಶುಚಿಗೊಳಿಸಿದರು. ತಾವೇ ಒಬ್ಬ ಭಂಗಿಯಾಗಲು ಗಾಂಧೀಜಿಗೆ ಸಾಧ್ಯವಾಯಿತು; ಅದರೊಂದಿಗೆ ಸಮಾಜದ ಓರೆಕೋರೆಗಳ ಬಗ್ಗೆ ಮಾತನಾಡುವ ನೈತಿಕಶಕ್ತಿಯನ್ನು ಅವರು ಗಳಿಸಿಕೊಂಡರು. ನಡೆ–ನುಡಿ ಎರಡರಲ್ಲೂ ವ್ಯತ್ಯಾಸ ಇಲ್ಲದ ಕಾರಣದಿಂದಲೇ, ಗಾಂಧೀಜಿಯನ್ನು ದೇಶ ಅನುಸರಿಸತೊಡಗಿತು. ಇದರರ್ಥ ಸರಳ: ಸಮಾಜದಲ್ಲಿ ನೈತಿಕತೆಯನ್ನು ಅಪೇಕ್ಷಿಸುವವರು ಮೊದಲಿಗೆ ವೈಯಕ್ತಿಕ ಚಾರಿತ್ರ್ಯ ಸಾಧಿಸಿಕೊಂಡಿರಬೇಕು.

ಮಕ್ಕಳು ನಾವು ಹೇಳುವುದನ್ನು ನೋಡಿ ಕಲಿಯಬೇಕೆಂದು ಬಯಸುವುದು ಸರಿಯಲ್ಲ. ಅದು ಸಾಧ್ಯವೂ ಇಲ್ಲ. ಕಲಿಕೆ ಯಶಸ್ವಿಯಾಗುವುದು 'ನೋಡಿ ಕಲಿಯುವ' ಪ್ರಕ್ರಿಯೆಯಲ್ಲಿ. ವೈಯಕ್ತಿಕವಾಗಿ ನಾವು ಸುಧಾರಿಸದೆ, ನಮ್ಮ ಕುಟುಂಬ ಅಥವಾ ಸುತ್ತಮುತ್ತಲಿನ ಪರಿಸರ ಚೆನ್ನಾಗಿರಲು ಸಾಧ್ಯವಿಲ್ಲ. ಪ್ರಸ್ತುತ ಸಮಾಜದಲ್ಲಿನ ಹಿಂಸೆ ನಮ್ಮ ಮನಸ್ಸುಗಳನ್ನು ಗಾಸಿಗೊಳಿಸಿದರಷ್ಟೇ ಸಾಲದು, ಅದರ ಬಗ್ಗೆ ಹೇವರಿಕೆಯೂ ನಮ್ಮಲ್ಲಿ ಮೂಡಬೇಕು. ಆ ಹೇವರಿಕೆ, ನಮ್ಮೊಳಗಿನ ರಾಡಿಯನ್ನು ಕಳೆದುಕೊಳ್ಳಲು ಪ್ರೇರಣೆಯಾಗಬೇಕು.

■ **ಚಂಪಕಮಾಲಾ**

## ಮಾತೇ ಮುತ್ತು

- ತೊಲಗಲಿ ದುಃಖ, ತೊಲಗಲಿ ಮತ್ಸರ, ಪ್ರೇಮಕ್ಕೆ ಮೀಸಲು ನವ ಸಂವತ್ಸರ.

  —ಕುವೆಂಪು

- ನನಗೆ ಕಾಲ ಕಳೆಯುವುದು ಹೇಗೆಂಬ ಚಿಂತೆಗಿಂತ ಕಾಲ ಕಳೆದು ಹೋಗುತ್ತದಲ್ಲಾ ಎನ್ನುವುದೇ ಚಿಂತೆ.

  —ಕೆ.ಪಿ.ಪೂರ್ಣಚಂದ್ರ ತೇಜಸ್ವಿ

- ಒಳ್ಳೆಯದನ್ನು ಮಾಡಲು ಮತ್ತೊಂದು ವರ್ಷ ಸಿಕ್ಕಿದೆ, ಚಿಯರ್ಸ್ ಟು ನ್ಯೂ ಇಯರ್

  —ಓಫ್ರಾ ವಿನ್‌ಫ್ರೇ

- ಜನ ನಡೆದಿದ್ದಾರೆ ಎಂದು ಸವೆದ ಹಾದಿಯಲ್ಲಿ ಹೋಗದಿರಿ. ನಿಮ್ಮದೇ ಹೊಸಹಾದಿಯನ್ನು ಸೃಷ್ಟಿಸಿಕೊಂಡು ಮುನ್ನಡೆಯಿರಿ.

  —ಗೌತಮ ಬುದ್ಧ

- ಪುಸ್ತಕಗಳಲ್ಲಿ ಹಳೆಯವೆಂಬುವೇ ಇಲ್ಲ. ಓದಿರದ ಪುಸ್ತಕಗಳೆಲ್ಲ ಹೊಸವು; ಮತ್ತೆ ಮತ್ತೆ ಓದಬೇಕೆನ್ನುವ ಪುಸ್ತಕಗಳೆಲ್ಲ ಹೊಸವು.

  —ಹಾ.ಮಾ. ನಾಯಕ

- ಹೊಸತನವೆ ಬಾಳು, ಹಲಸಿಕೆಯೆಲ್ಲ ಸಾವು ಬಿಡು.

  —ಡಿವಿಜಿ

- 'ಹೊಸದು' ಎಂಬುದು ನಮ್ಮನ್ನು ಹೆದರಿಸಬೇಕಾಗಿಲ್ಲ.

  —ಟಿ.ಪಿ. ಕೈಲಾಸಂ

- ನಾಳೆ ಎಂಬುದು 365 ಪುಟದ ಪುಸ್ತಕದ ಮೊದಲ ಖಾಲಿ ಹಾಳೆಯಾಗಿದೆ. ಒಳ್ಳೆಯ ಅಂಶವನ್ನೇ ಇಲ್ಲಿ ಬರೆಯಿರಿ.

  —ಬ್ರಾಡ್ ಪೈಸ್ಲಿ